KACM010010622021

Presented on : 04-05-2021
Registered on : 04-05-2021
Decided on : --
Duration :

**IN THE COURT OF**
**ADDL DISTRICT AND SESSIONS JUDGE CHIKMAGALUR**
**AT Chikmagalur,CHIKMAGALUR**
**(Presided Over by B PUSHPANJALI)**

**SC/87/2021**

**Exhibit No.**

Complainant(PROSECUTION):

State by Sakharayapatna Police, Rept. by The Public Prosecutor, Chikkamagaluru.

**VERSUS**

Accused:
Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM
Age: 33
Occupation :
R/o Machagondanahalli Village, S.K. Patna Hobli, Kadur Taluk, CKM

---------------------------------------------------------------------------

APP for State Complainant}: Public Prosecutor,
Advocate for I.S. THEJASVI appearing for Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM Advocate appearing for , respectively.

---------------------------------------------------------------------------

**Offence punishable under :**
**Sec.302, of INDIAN PENAL CODE,**

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು**

**<u>ಸತ್ರ ಮೊಕದ್ದಮೆ ಸಂಖ್ಯೆಃ 87/2021</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಗಣೇಶಪ್ಪ | **ಪಿ.ಡಬ್ಲ್ಯೂ** | 09 |
| **ತಂದೆಯ ಹೆಸರು** | ಗಂಗಾಧರಪ್ಪ | **ಸಿ.ಡಬ್ಲ್ಯೂ** | 04 |
| **ವಯಸ್ಸು** | 52 ವರ್ಷ | | |
| **ಉದ್ಯೋಗ** | ವ್ಯಾಪಾರ | | |
| **ವಾಸಸ್ಥಳ** | ಮಾಚಗೊಂಡನಹಳ್ಳಿ, ಕಡೂರು ತಾಃ | | |

**ಆರೋಪಿಯನ್ನು ಚಿಕ್ಕಮಗಳೂರು ಜಿಲ್ಲಾ ಕಾರಗೃಹದಿಂದ ವಿ.ಸಿ. ಮೂಲಕ ಹಾಜರು ಪಡಿಸಿರುತ್ತಾರೆ**

**ದಿಃ 07-02-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

1. ಮೃತರು ನನಗೆ ಸಹೋದರರಾಗಬೇಕು. **ಈಗ ನ್ಯಾಯಾಲಯದ ಮುಂದೆ ವಿಸಿ ಮೂಲಕ ಕಾಣುತ್ತಿರುವ ಆರೋಪಿಯು ಮೃತರ ಮಗ. ಚಾಸಾ.6 ರವರು ಮೃತರ ಹೆಂಡತಿ. ಚಾಸಾ.1 ರವರು ಮೃತ ಮಗಳು. ಉಳಿಕೆ ಸಾಕ್ಷಿದಾರರು ನಮ್ಮ ಊರು ಮನೆಯವರು.**

2. **ಮೃತ ತಮ್ಮಯ್ಯರವರನ್ನು ಆರೋಪಿಯು ಹೊಡೆದು ಸಾಯಿಸಿದ್ದಾರೆ ಅಂತ ಗೊತ್ತಾಯಿತು. ಈಗ ನೋಡುತ್ತಿರುವ ನಿಪಿ.5 ಮತ್ತು ಪಿ.6 ಫೋಟೋಗಳಲ್ಲಿ ನನ್ನ, ಚಾಸಾ.5 ರವರ ಇರುವಿಕೆ ಕಂಡು ಬರುತ್ತದೆ. ಸದರಿ ಫೋಟೋಗಳನ್ನು ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಯ**

ಶವಗಾರದಲ್ಲಿ ತೆಗೆದಿರುತ್ತಾರೆ. ಸದರಿ ಫೋಟೋಗಳಲ್ಲಿ ಮೃತರ ಶವ ಕಂಡು ಬರುತ್ತದೆ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

3. ಈಗ ನೋಡುತ್ತಿರುವ ನೋಟೀಸ್ ಮತ್ತು ಶವ ಪಂಚನಾಮೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ನೋಟೀಸ್ ಮತ್ತು ಶವ ಪಂಚನಾಮೆಯನ್ನು ನಿಶಾನೆ ಪಿ.20 ಮತ್ತು ಪಿ.21 ಎಂದು ಮತ್ತು ಅವುಗಳ ಮೇಲೆ ಸಾಕ್ಷಿ ಗುರುತು ಹಿಡಿದ ತಮ್ಮ ಸಹಿಯನ್ನು ನಿಶಾನೆ ಪಿ.20(ಎ) ಮತ್ತು ನಿಶಾನೆ ಪಿ.21(ಎ) ಎಂದು ಗುರುತಿಸಲಾಯಿತು. ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಯ ಶವಗಾರದಲ್ಲಿ ನಿಶಾನೆ ಪಿ.20 ಮತ್ತು ಪಿ.21 ಕ್ಕೆ ನಾನು ಮತ್ತು ಚಾಸಾ.5 ರವರು ರುಜು ಮಾಡಿರುತ್ತೇವೆ. ನಿಶಾನೆ ಪಿ.21 ಮಹಜರನ್ನು ಬರೆದ ಸಮಯ ನನಗೆ ಗೊತ್ತಿಲ್ಲ. ನಿಶಾನೆ ಪಿ.21 ಮಹಜರನ್ನು ಬರೆಯುವಾಗ ಬೇರೆ ಯಾರು ಇದ್ದರು ಅಂತ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಹೇಳಿಕೆ ಮತ್ತು ಶವ ಪಂಚನಾಮೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಮಾನ್ಯ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

4. ದಿಃ 11-01-2021 ರಂದು ನಾನು ನಮ್ಮೂರ ದೇವಸ್ಥಾನದ ಹತ್ತಿರ ಕುಳಿತ್ತಿದ್ದಾಗ ಮೃತ ತಮ್ಮಯ್ಯರವರು ಅವರ ಮನೆಯ ಕಡೆಯಿಂದ ಗಾಬರಿಯಾಗಿ ಓಡಿ ಬರುತ್ತಿದ್ದರು ಎಂದರೆ ಸರಿಯಲ್ಲ. ತಮ್ಮಯ್ಯರವರ ಹಿಂದೆ ಆರೋಪಿಯು ಸಹ ಓಡಿ ಬಂದನು ಎಂದರೆ ಸರಿಯಲ್ಲ. ಇದನ್ನು

ಕಂಡ ಕಾರ್ತಿಕನು ಅವರ ಜಗಳವನ್ನು ಬಿಡಿಸಲೆಂದು ಬೈಕನ್ನು ನಿಲ್ಲಿಸಿ ಓಡಿದನು, ಕೂಡಲೇ ನಾನು ಕಾರ್ತಿಕನಿಗೆ ಸಹಾಯ ಮಾಡಿ ಜಗಳ ಬಿಡಿಸಲು ಹೋದೆ ಎಂದರೆ ಸರಿಯಲ್ಲ. ಅಷ್ಟರಲ್ಲಿ ಆರೋಪಿಯು ಶಾಲೆ ಹಿಂಭಾಗ ಗೋಡೆ ಪಕ್ಕದಲ್ಲಿ ತಮ್ಮಯ್ಯರವರನ್ನು ಮಕಾಡೆ ಕೆಡುವಿ ಮಲಗಿಸಿಕೊಂಡು ಕಲ್ಲಿನಿಂದ ತಲೆಗೆ ಹೊಡೆದು ಬೆನ್ನಿನ ಮೇಲೆ ಕುಳಿತುಕೊಂಡಿದ್ದನು ಎಂದರೆ ಸರಿಯಲ್ಲ. ಆರೋಪಿಯು ನಮ್ಮಗಳನ್ನು ನೋಡಿದ ಕೂಡಲೇ ಕಾರ್ತಿಕನಿಗೆ, ನೀವ್ಯಾಕೆ ಇಲ್ಲಿಗೆ ಬಂದಿದ್ದೀಯಾ ಎಂದು ಜೋರಾಗಿ ಕೇಳಿದನು ಎಂದರೆ ಸರಿಯಲ್ಲ. ಕೂಡಲೇ ಕಾರ್ತಿಕನು ಆರೋಪಿಗೆ ಎಳೆದು ಹಿಡಿಯಲು ಮುಂದೆ ಹೋಗಿದ್ದು, ನಾನು ಸಹ ಆತನೊಂದಿಗೆ ಸೇರಿ ಆರೋಪಿಯನ್ನು ಹಿಡಿದಿಟ್ಟುಕೊಂಡೆವು ಎಂದರೆ ಸರಿಯಲ್ಲ. ತಮ್ಮಯ್ಯರವರು ಸ್ಥಳದಲ್ಲೇ ಒದ್ದಾಡಿ ಮೃತಪಟ್ಟರು ಎಂದರೆ ಸರಿಯಲ್ಲ. ಅಷ್ಟರಲ್ಲಿ ಅಲ್ಲಿ ತಮ್ಮಯ್ಯರವರ ಮಗಳು ಮತ್ತು ನಮ್ಮೂರಿನ ಜನ ಸೇರುತ್ತಿದ್ದಂತೆ ಆರೋಪಿಯು ನಮ್ಮಗಳನ್ನು ತಳ್ಳಿ ಕೊಲೆ ಮಾಡಲು ಉಪಯೋಗಿಸಿದ ಕಲ್ಲನ್ನು ಅಲ್ಲೇ ಸ್ಥಳದಲ್ಲಿ ಬಿಸಾಡಿ ತೋಟದ ಕಡೆಗೆ ಓಡಿ ಹೋದನು ಎಂದರೆ ಸರಿಯಲ್ಲ.

5. ನಂತರ ನಾನು ತಮ್ಮಯ್ಯರವರ ಮಗಳು ಉಷಾರವನ್ನು ವಿಚಾರಿಸಿದಾಗ, ಮಧ್ಯಾಹ್ನ 3 ಗಂಟೆಗೆ ತನ್ನ ತಂದೆ ಮೃತ ತಮ್ಮಯ್ಯರವರು ಜಮೀನಿಗೆ ಹೋಗಿ ವಾಪಸ್ ಮನೆಗೆ ಬಂದು ಮನೆಯಲ್ಲಿದ್ದ ಆರೋಪಿಗೆ ಟ್ರ್ಯಾಕ್ಟರ್ ನ ಸಾಲವನ್ನು ಕಂತು ಕಟ್ಟದಿರುವ ಬಗ್ಗೆ ಕೇಳಿದ್ದು, ಬ್ಯಾಂಕಿನ ಸಿಬ್ಬಂದಿಯವರು ತನ್ನ ಬಳಿ ಬಂದು ಟ್ರ್ಯಾಕ್ಟರ್ ನ ಸಾಲದ ಹಣ ಕಟ್ಟಿಲ್ಲವೆಂದು

ಕೇಳಿ ನನ್ನ ಮರ್ಯಾದೆ ತೆಗೆದು ಹೋಗಿರುತ್ತಾರೆ, ನೀನು ದುಡಿದು ಟ್ರಾಕ್ಟರ್ ನ ಕಂತನ್ನು ಕಟ್ಟಲು ಆಗುವುದಿಲ್ಲವೇ, ಬಿಟ್ಟಿ ಓಡಾಡಿಕೊಂಡು ದಂಡಪಿಂಡನಂತೆ ಇರುತ್ತೀಯಾ ಎಂದು ಬೈದಿದ್ದು, ಆಗ ಒಬ್ಬರಿಗೊಬ್ಬರು ಮಾತಿಗೆ ಮಾತು ಬೆಳೆದು ಬೈದಾಡಿಕೊಂಡು ಜಗಳ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಮತ್ತು ನನ್ನ ತಾಯಿ ಹಾಗೂ ಚಿಕ್ಕಪ್ಪ ಇಂದ್ರೇಶ್ ರವರು ಸೇರಿ ಜಗಳ ಬಿಡಿಸಿ ಸಮಾಧಾನ ಮಾಡಿದೆವು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಮಧ್ಯಾಹ್ನ 3.30 ಗಂಟೆಗೆ ನನ್ನ ತಂದೆ ತೋಟಕ್ಕೆ ಹೋಗುವುದಾಗಿ ಮನೆಯಿಂದ ಹೊರಟು ಮನೆಯ ಬಳಿ ಹೋಗುತ್ತಿದ್ದಾಗ ಮತ್ತೆ ಆರೋಪಿಯು ನನ್ನ ತಂದೆಯೊಂದಿಗೆ ಗಲಾಟೆ ಮಾಡಿ ಇವತ್ತು ನಿನ್ನನ್ನು ಕೊಲೆ ಮಾಡಿ ಕಂತು ಕಟ್ಟುತ್ತೇನೆ ಎಂದು ಹೇಳುತ್ತಾ ಅಲ್ಲೇ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ಹೊಡೆಯಲು ಹೋದಾಗ ನನ್ನ ತಂದೆಯವರು ಅಲ್ಲಿಂದ ಓಡಿ ಹೋದರು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಕೈಯಲ್ಲಿ ಕಲ್ಲನ್ನು ಹಿಡಿದುಕೊಂಡು ನನ್ನ ತಂದೆಯ ಹಿಂದೆ ಹೋಗಿದ್ದು ನನ್ನ ತಂದೆಯು ಅವನಿಂದ ತಪ್ಪಿಸಿಕೊಳ್ಳಲು ನಮ್ಮೂರಿನ ಶಾಲೆ ಕಡೆಗೆ ಓಡಿ ಹೋಗಿದ್ದು, ಅವರ ಹಿಂದೆ ಆರೋಪಿಯು ಕಲ್ಲನ್ನು ಹಿಡಿದುಕೊಂಡು ಓಡಿದನು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.22 ಎಂದು ಗುರುತಿಸಲಾಯಿತು.

6. ನಂತರ ನಾನು ಮೃತರ ಶವವನ್ನು ನೋಡಲು ಚಿಕ್ಕಮಗಳೂರು

ಸರ್ಕಾರಿ ಆಸ್ಪತ್ರೆಗೆ ಹೋಗಿದ್ದಾಗ ತನಿಖಾಧಿಕಾರಿ ನನಗೆ ಮತ್ತು ಚಾಸಾ.5 ರವರಿಗೆ ನಿಪಿ.20 ರಂತೆ ನೋಟೀಸ್ ನೀಡಿ ಮೃತ ಶವ ಪಂಚನಾಮೆಯನ್ನು ನಿಪಿ.21 ರಂತೆ ಮಾಡಿ ಫೋಟೋಗಳನ್ನು ತೆಗೆಸಿದಾಗ ನಾವುಗಳು ರುಜು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಸಾಮಾನ್ಯ ಜ್ಞಾನ ಇದೆ ಎಂದರೆ ಸರಿ. ನಾನು ಯಾವುದೇ ದಾಖಲೆಗೆ ರುಜು ಮಾಡುವ ಮೊದಲು ಓದಿ ತಿಳಿದುಕೊಳ್ಳದೇ ರುಜು ಮಾಡುತ್ತೇನೆ ಎಂದರೆ ಸರಿ. ನನಗೆ ಎಲ್ಲಾ ಮಾಹಿತಿ ಇದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ</u>

7. ಮೃತ ತಮ್ಮಯ್ಯರವರನ್ನು ನೋಡಲು ಆಸ್ಪತ್ರೆಗೆ ಹೋಗಿದ್ದು ಬಿಟ್ಟರೆ ಅವರು ಹೇಗೆ ಮತ್ತು ಯಾವ ಕಾರಣಕ್ಕೆ ಮೃತ ಪಟ್ಟರು ಅಂತ ನನಗೆ ಗೊತ್ತಿಲ್ಲ. ನಿಪಿ.20 ಮತ್ತು ಪಿ.21 ರಲ್ಲಿ ಏನು ಬರೆದಿದೆ ಅಂತ ನನಗೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-

(ಬಿ.ಪುಷ್ಪಾಂಜಲಿ)

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ರೂ.

Visit **ecourts.gov.in** for updates or download mobile app “**eCourts Services**” from Android or iOS